। ಹರಿಃ ಓಂ ।

## ಆರಿಗಾರಾಗುವರೊ ಆಪತ್ತು ಕಾಲಕ್ಕೆ

ಆರಿಗಾರಾಗುವರೊ ಆಪತ್ತು ಕಾಲಕ್ಕೆ
ಆರಿಗಾರೊದಗುವರೊ ಸಂಪತ್ತು ಕಾಲಕ್ಕೆ
ಆರಿಂದ ಬಪ್ಪುವುದು ಆರಿಂದ ತಪ್ಪುವುದು
ಆರಿಸಿನೋಡುವುದು ಇದರ ಕಾರಣವ ಇದ
ಕಾರು ವಾರಣದಲಿ ನೋಡಿ
ಆರೋಪಿಸಲು ಎಲ್ಲ ಭಾರ ಅವಗೆ
ಕಾರುಣ್ಯಮೂರುತಿ **ಗೋಪಾಲವಿಟ್ಠಲ**
ಈ ರೀತಿ ಅರಿದವಗೆ ಇಲ್ಲೆ ಪೊರೆವ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಆನಂದ ಕೊಡುವುದು ನಿನ್ನಂದ ಮಾತ್ರದಿ

ಆನಂದ ಕೊಡುವುದು ನಿನ್ನಂದ ಮಾತ್ರದಿ
ಆನಂದ ಕೊಡುವುದು ನಾನಂದ ಮಾತ್ರದಿ
ಆನಂದವೆಂಬ ಸಥೆಯು ಆನಾಡಲಿಲ್ಲವೆಂದು
ಆನಂದಮೂರುತಿ ಹರಿ ಆಡಿಸಿದನೆಂತೆಂದು
ಆನಂದನಾಗಿ ಶ್ರೀಮದಾನಂದತೀರ್ಥರ
ಆನಂದ ಉಕ್ತಿಯು ಆನಂದದಲ್ಲಿದ್ದರೆ
ಆನಂದ ಕೊಡುವುದುಆನಂದಮೂರುತಿಯ
ಆನಂದವೆಂಬೋದಿನ್ನೊಂದು ಅರಿಯೆನು
ಆನಂದಗುಣಪೂರ್ಣ **ಗೋಪಾಲವಿಟ್ಠಲ**
ಈ ನಿಮಿಷವೆ ಸಾಕು ನಿನ್ನ ತಿಳಿವವ ಧನ್ಯ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಅನಂತನ್ನ ನೋಡಿ ಅಗಣಿತ ಗುಣಗಣನ

ಅನಂತನ್ನ ನೋಡಿ ಅಗಣಿತ ಗುಣಗಣನ
ಅನಂತನ್ನ ಪಾಡಿ ಆಗಮಾದಿ ವಿನುತನ
ಅನಂತನ್ನ ಬೇಡಿ ಅನಿಮಿತ್ತಬಾಂಧವನ
ಅನಂತನ್ನ ತಿಳಿರಿ ಅಧಿಕಾರಾನುಸಾರ
ಅನಂತಜನರ ಪೊರೆವಾನಂತರೂಪನಾಗಿ
ಅನಂತನೇವ ಅಹೋಬಲನಾರಸಿಂಹನಾಗಿ
ಅನಂತಪರಿಯ ತುತಿಪೊಅ ಮಾರ್ಕಂಡೇಯುಗೊಲಿದು
ಅನಂತಮೂರ್ತಿತೋರಿ ಆತನ ವ್ರತವಗೆಲಿಸಿ
ಅನಂತ ಸಿರಿ ಅಜಭವಾದ್ಯರಿಂದಲಿನ್ನು
ಅನಂತಪರಿಯಲ್ಲಿ ಸ್ಮರಿಸಿಕೊಳುತಿಪ್ಪ
ಅನಂತಗಿರಿವಾಸ ಗೋಪಾಲವಿಟ್ಠಲ
ಅನಂತನಿಂದಲಿ ಅನಂತತೀರ್ಥ ಉಂಟು

। ಶ್ರೀ ಕೃಷ್ಣಾರ್ಪಣ ಮಸ್ತು ।

।ಹರಿಃ ಓಂ।

## ಇನ್ನೊಂದು ದೇವರ ನಾಕಾಣೆ

ಧರಿಯೊಳು ಇದ್ದಂಥ ಪರಿ ಪರಿ ಕಮಲಗಳು
ಅರಳುವದಕ್ಕೆ ಇನ್ನು ಬೇರೆ ಬೇರೆ ರವಿವುಂಟೆ
ವರುಷಕಾಲಗಳಲ್ಲಿ ಸುರಿಸುವ ಮೇಘಗಳು
ಪರಿ ಪರಿ ಗ್ರಾಮಕ್ಕೆ ಪರಿ ಪರಿ ಬೇರುಂಟೆ
ಎರಡೇಳುಲೋಕಕ್ಕೆ ಧೊರಿ ನೀನಲ್ಲದೆ
ಮರಳಿ ಇನ್ನೊಂದು ದೇವರ ನಾಕಾಣೆ
ಕರುಣಾಕರ ರಂಗ ಗೋಪಾಲವಿಟ್ಠಲ
ಮೊರೆಹೊಕ್ಕೆನೋ ಕಾಯೋ ಬಿರುದುಳ್ಳ ದೇವ.

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಧನದ ಅಪೇಕ್ಷಕ್ಕೆ ನಿನ್ನ ಪೂಜೆಯು ಬೇಡ

ಧನದ ಅಪೇಕ್ಷಕ್ಕೆ ನಿನ್ನ ಪೂಜೆಯು ಬೇಡ
ವನಿತೆ ಅಪೇಕ್ಷಿಸಿ ನಿನ್ನ ಪೂಜೆಯು ಬೇಡ
ಮನೆಯು ಅಪೇಕ್ಷಿಸಿ ನಿನ್ನ ಪೂಜೆಯು ಬೇಡ
ಘನಸುತರಿಗಾಗಿ ನಿನ್ನ ಪೂಜೆಯು ಬೇಡ
ಕನಸಿನೊಳದಾರು ಕಾಮ್ಯಫಲಕೆ ನಿನ್ನ
ನೆನಸದಂತೆ ಮಾಡು ನ್ಯಾಯದಲೆ ಇನ್ನು
ಎನಗೆ ಈ ದೇಹದಲ್ಲೇನೇನು ಅನುಭೋಗ
ಅನುವಾಗಿ ಇದ್ದದ್ದು ಉಣಿಸದೆ ಬಿಡಿ ಇನ್ನು
ಎನಗೇನು ಈ ದೇಹ ಹೇಗೆ ಬಂದೀತೆಂದು
ಕ್ಷಣವು ಆದರು ನಿನ್ನ ಚಿಂತಿಸಿ ಇದ್ದೇನೆ
ತನುವು ಕೊಟ್ಟವಗೆ ತಾಪತ್ರಯದ ಚಿಂತೆ
ಎನಗೆ ಎನಗೇನು ಯೋಚನಿಲ್ಲ
ತನುಮನದೊಡೆಯನೆ ಗೋಪಾಲವಿಟ್ಠಲ
ಎನಗೆ ನಿಷ್ಕಾಮಕ ನಿನ್ನಾರಾಧನೆ ಈಯೋ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಏನನ್ನರಿಯೆ ನಿನ್ನ ಮಹಿಮೆ

ಏನನ್ನರಿಯೆ ನಿನ್ನ ಮಹಿಮೆ ಏನನ್ನರಿಯೆ ನಿನ್ನ ಸೇವೆ
ಏನನ್ನರಿಯೆ ಪ್ರೀತಿಕರ್ಮ ಏನನ್ನರಿಯೆ ಜ್ಞಾನಮಾರ್ಗ
ಏನನ್ನರಿಯೆ ಭಕುತಿಸ್ಥಿತಿಯು ಏನನ್ನರಿಯೆ ವಿರಕುತಿಯ
ಏನೊ ನಿನ್ನ ಕರುಣ ಪೂರ್ಣ ನೀನು ಎಂದು ನಾನು ಬಲ್ಲೆ
ದೀನನಾಥ ಎನ್ನ ಅವಗುಣ ಗುಣ ನಿನಗೇನೊ
ಜೇನುಕ್ರಿಮಿಗಳ ವಮನವನು ಮಜ್ಜನವು ಎಂದು
ಜ್ಞಾನಿಗಳು ಪಾದದಡಿಯಲಿ ನಾನು ಬಿದ್ದವನು ಎಂದು

ನೀನೆ ನೋಡಿ ಸಾಕಬೇಕು ಶ್ರೀನಿವಾಸದಯಾಂಬುಧಿ
ಮಾನಿಸರೊಪಾಗಿ ಪೊಳೆದ ಜಾಣ ಗೊಪಾಲವಿಟ್ಠಲ
ಪಾಣಾಧಾರ ನಿನ್ನ ಇರವ ಧ್ಯಾನದೊಳಗೆ ನಿಲಿಸಿಕಾಯೋ

। ಶ್ರೀ ಕೃಷ್ಣಾರ್ಪಣ ಮಸ್ತು ।

।ಹರಿಃ ಓಂ।

## ಕೊಮಲೆ ರಮಾದೇವಿಯ ನೋಡಬನ್ನಿರೆ

ಕೊಮಲೆ ರಮಾದೇವಿಯ ನೋಡಬನ್ನಿರೆ
ಕಮಲಾರಿಸಹೋದರಿಯನೀಗೆ ಬೇಡಬನ್ನಿರೆ
ಇಂದುನಿಭದ ಸುಂದರಿಯರು ಬಂದು ನೋಡಿರೆ ಈ
ಕುಂದರದನೆ ಮಂದರೋದರನರ್ಧಾಂಗಿಯ
ಭಂಕ್ತಿಯಿಂದ ಭಜಿಪರಿಗೆ ಮುಂಕ್ತಿಕೊಡುವಳೆ
ಶಕ್ತಿಯುಕ್ತಿಗಳನೆ ಕೊಟ್ಟು ಅರ್ತಿ ಮಳ್ಪಳೆ
ದಾಸನಾದರೆ ಶ್ರೀಶನರಾಣಿ ಪೋಷಿಸುವಳೆ
ಗೋಪಾಲವಿಟ್ಠಲ ಘಸಿಮಾಡದೆ ಪೋಷಿಸುವಳೆ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಕಾಯೋ ಶ್ರೀನಾರಸಿಂಹ ಕಾಯೋ

ಕಾಯೋ ಶ್ರೀನಾರಸಿಂಹ ಕಾಯೋ
ಕಾಯೋ ಶ್ರೀನಾರಸಿಂಹ ತ್ರ್ಯಂಬಕಾದ್ಯಮರೇಶ
ಭಯಾಂಧಂತಿವಿರಮಾರ್ತಾಂಡ ಶ್ರೀನಾರಸಿಂಹ
ಘೋರ ಅಕಾಲಮೃತ್ಯು ಮೀರಿ ಬರಲು ಕಂಡು
ಧೀರ ನೀಬಿಡಿಸದಿನ್ನಾರೋ ಶ್ರೀನಾರಸಿಂಹ
ಧಿಷಣನೆ ಸುಭದ್ರ ಘೋರ ಮೃತ್ಯುಗೆ ಮೃತ್ಯು
ಸುಷುಮ್ನಾನಾಡಿಸ್ಥಿತ ವಿಭುವೆ ಶ್ರೀನಾರಸಿಂಹ

ನರಹಿತನಾಗಿ ನಾ ನಿನ್ನ ಮರೆತರೆ
ನೀನು ಮರತದ್ದೇಕೂ ಪೇಳೋ ಶ್ರೀನಾರಸಿಂಹ
ಪ್ರಬಲೋತ್ತಮನೆನಿಸಿ ಅಬಲರ ಕಾಯದಿರೆ
ಸುಬಲರು ಕಂಡು ಮೆಚ್ಚುವರೆ ಶ್ರೀನಾರಸಿಂಹ
ಪಾಲಮುನ್ನೀರಾಗಾರ ಪದಮೆ ಮನೋಹರ
**ಗೋಪಾಲವಿಟ್ಠಲ** ಜಗತ್ಪಾಲ ಶ್ರೀನಾರಸಿಂಹ

। ಶ್ರೀ ಕೃಷ್ಣಾರ್ಪಣ ಮಸ್ತು ।

।ಹರಿಃ ಓಂ।

## ನಿನ್ನ ಕರುಣದಿಂದೆ ಎನ್ನ ಸೃಷ್ಟಿಸಿದದ್ದು

ನಿನ್ನ ಕರುಣದಿಂದೆ ಎನ್ನ ಸೃಷ್ಟಿಸಿದದ್ದು
ನಿನ್ನ ಕರುಣದಿಂದೆ ಎನ್ನ ಪಾಲಿಸುವದು
ನಿನ್ನ ಕರುಣದಿಂದೆ ದೇಹ ವಿಯೋಗವು
ನಿನ್ನ ಕರುಣದಿಂದೆ ಎನ್ನ ಬಾಳವಿ ಬದುಕು
ನಿನ್ನ ಕರುಣದಿಂದೆ ಮಾನಾಪಮಾನವು
ನಿನ್ನ ಕರುಣದಿಂದೆ ಲಾಭಾಪಜಯಗಳು
ನಿನ್ನ ಕರುಣದಿಂದೆ ಸಾಧನಸಂಪತ್ತು
ನಿನ್ನ ಕರುಣದಿಂದೆ ಬಂದನನಿವೃತ್ತಿ
ನಿನ್ನ ಕರುಣದಿಂದೆ ಆಗುವದೂ ರಂಗ
ಎನ್ನಿಂದ ನಿನಗಿನ್ನು ಲೇಶಾಪೇಕ್ಷೆಯು ಇಲ್ಲ
ನಿನ್ನ ಹಂಗಿನೂಳು ಮುಳುಗಿ ಆಡುವೆನಯ್ಯಾ
ಇನ್ನು ಇಲ್ಲಿಗೆ ಸರಿ ಆಯಿತೆಂಬುವೇನೇ
ಇನ್ನು ಮುನ್ನೆ ಇದೆ ಆಗಲಿ ಆಗಲಿ
ಅನ್ನಮಯ ಮೂರ್ತಿ **ಗೋಪಾಲವಿಟ್ಠಲ**
ಜನುಮಜನುಮಕ್ಕೆ ನೀನೆ ಎನಗೆ ದಾತಾ

। ಶ್ರೀ ಕೃಷ್ಣಾರ್ಪಣ ಮಸ್ತು ।

।ಹರಿಃ ಓಂ।

## ಒಂದೆ ಬೇಡುವೆ ನಿನ್ನ

ಒಂದೆ ಬೇಡುವೆ ನಿನ್ನ ಒಂದೆ ದೇವನೆ ಕೇಳು
ಒಂದೆ ಮನವು ಕೊಡು ವಂದಿಸೆ ನಿನ್ನನು
ಹಿಂದಾನಂತ ಜನ್ಮದಿ ಮಾಡಿದ ದೋಷ
ಮುಂದಾಗುವ ಅನಂತ ದೋಷಗಳಿಗೆ
ಒಂದು ಬಾರಿ ನಿನ್ನ ಸ್ಮರಣೆ ಮರಿಸದೆ
ಚಂದದಿ ನಿಂತು ಆನಂದದಿ ಪೊರಿಯೊ
ಬಂದೆನು ನಾನಿತ್ತ ಬರಬಾರದೆ ಇನ್ನು
ನೊಂದೆನೊ ನಾ ಬಲು ಬಂಧಾನ ಸಿಲ್ಕಿನ್ನು
ತಂದದಕ್ಕೆ ಎನ್ನ ತಂದು ಕಾರ್ಯಮಾಡಿಸಿ
ಪೊಂದಿಸು ನಿನ್ನ ಅರವಿಂದ ಚರಣದ್ದಲ್ಲಿ
ಕಂದರ್ಪನಯ್ಯಾ **ಗೋಪಾಲವಿಟ್ಠಲ** ಇನ್ನು
ಎಂದೆಂದಿಗೆ ಇನ್ನು ನೀನೆ ನೀನೆ ಗತಿ.

। ಶ್ರೀ ಕೃಷ್ಣಾರ್ಪಣ ಮಸ್ತು ।

।ಹರಿಃ ಓಂ।

## ಊರ ಔತನ ಹೇಳಿ ಸಾರಿ ಡಂಗುರ

ಊರ ಔತನ ಹೇಳಿ ಸಾರಿ ಡಂಗುರ ಹೊಯಿಸಿ
ಧಿರರಾಯರಿಗೆಲ್ಲ ಸಾರ ಷಡ್ರಸವಿತ್ತು
ತಿರುಗಿ ತಿರುಗಿ ಇನ್ನು ಬೀರುತ್ತ ಉಣಿಸೋಗೆ
ದ್ವಾರದಲೊಬ್ಬ ಮಾಧಕಾರದವನು ಬಂದು
ಅರಿವರಿದರಿನ್ನು ಹಾರಿಸ್ಯಾಕುವರುಂಟೆ
ಕಾರುಣ್ಯಮೂರೊತಿ ಕರುಣ್ದಿಂದಲಿ ಕೇಳು
ನೀರೊಳಗಿನ ಮತ್ಸ್ಯ ನೀರೇಬಯಸುವವು
ಘೋರ ಅರಣ್ಯಕ್ಕೆ ಹಾರೈಸಬಲ್ಲವೆ
ಮಾರಜನಕ ನಮ್ಮ **ಗೋಪಾಲವಿಟ್ಠಲ**
ಸೇರಿಸೊ ನಿನ್ನನು ಸೇರಿದವರ ಬಳಿಯಾ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಶುಭವೆಂದು ಪಿಡಿಯೆ ಶುಭದೊಳಶುಭವುಂಟು

ಶುಭವೆಂದು ಪಿಡಿಯೆ ಶುಭದೊಳಶುಭವುಂಟು ಅ
ಶುಭವೆಂದು ಬಿಡಲು ಅಶುಭದೊಳು ಶುಭವುಂಟು
ಶುಭವು ಅಶುಭವು ಎರಡಿಂದು ಎನಗೆ
ವಿಭಾಗ ತಿಳಿಯದು ವಿವರಿಸಿ ನೋಡಲು
ಶುಭಕೆ ಕಾರಣ ನೀನೆ ಅಶುಭಕೆ ಕಾರಣನೆಂದು
ದ್ವಿಭಾಗವು ವಿವರಣೆ ನಭದವರೆ ಮಾಡಿಹರು
ಇಭರಾಜಪಾಲಕ ಗೋಪಾಲವಿಟ್ಠಲ
ಶುಭ ಅಶುಭವು ನಿನ್ನಾಧೀನ ಇಪ್ಪವು

। ಶ್ರೀ ಕೃಷ್ಣಾರ್ಪಣ ಮಸ್ತು ।